ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 01-08-1971

*ಸ್ವಯಂನ ಸ್ಥಿತಿಯನ್ನು ಸೆಟ್ ಮಾಡಿಕೊಳ್ಳುವ ವಿಧಿ* (स्वयं की स्टेज को सेट करने की विधि)

ಇಂದು ಸಮಾಪ್ತಿಯ ದಿನವಾಗಿದೆಯೋ ಅಥವಾ ಸಮರ್ಪಣೆಯಾಗುವ ದಿನವಾಗಿದೆಯೋ? ಸಮರ್ಪಣೆ ಎಂದರೆ ಈಶ್ವರೀಯ ಮರ್ಯಾದೆಗಳಿಗೆ ವಿರುದ್ಧವಾಗಿರುವ ಸಂಸ್ಕಾರ, ಸ್ವಭಾವ, ಕರ್ಮಗಳನ್ನು ಸಮರ್ಪಣೆ ಮಾಡುವುದು. ಯಾವುದಾದರೂ ಮಶಿನರಿಯನ್ನು ಒಂದು ಸಾರಿ ಸೆಟ್ ಮಾಡಿದಾಗ ಅದು ಸ್ವಯಂಚಾಲಿತವಾಗುತ್ತದೆ. ಅದೇ ರೀತಿ ಭಟ್ಟಿಯಲ್ಲಿಯಲ್ಲಿಯೂ ತಮ್ಮ ಸಂಪೂರ್ಣ ಸ್ಥಿತಿಯನ್ನು, ತಂದೆಯ ಸಮಾನ ಸ್ಥಿತಿ, ಕರ್ಮಾತೀತ ಸ್ಥಿತಿಯ ಸ್ಟೇಜ್ ಅನ್ನು ಈ ರೀತಿ ಸೆಟ್ ಮಾಡಿಕೊಂಡಿದ್ದೀರಾ? ಅದೇ ರೀತಿ ಸಂಕಲ್ಪ, ಶಬ್ದ ಅಥವಾ ಕರ್ಮಗಳನ್ನೂ ಅದೇ ಸಂಯೋಜನೆಗನುಸಾರ ಸ್ವಯಂಚಾಲಿತ ರೀತಿಯಲ್ಲಿ ನಡೆಯುತ್ತಿರುವಂತೆ ಸೆಟ್ ಮಾಡಿಕೊಂಡಿರುವಿರಾ? ಈ ತರಹ ಅಧಿಕಾರಿಯ ಸ್ಮೃತಿಯ ಸ್ಥಿತಿಯಯನ್ನು ಸೆಟ್ ಮಾಡಿಕೊಂಡಿರುವಿರಾ? ಸರ್ವೋಚ್ಚ ಅಧಿಕಾರಿ ತಂದೆಯಾಗಿದ್ದಾರಲ್ಲವೇ? ತಾವೆಲ್ಲರೂ ಮಾಸ್ಟರ್ ಸರ್ವೋಚ್ಚ ಅಧಿಕಾರಿ ಎಂದು ತಮ್ಮನ್ನು ತಿಳಿದುಕೊಳ್ಳುತ್ತೀರಾ? ಯಾರು ಸರ್ವೋಚ್ಚ ಅಧಿಕಾರಿಯ ಸ್ಟೇಜ್ ಅನ್ನು ಒಂದು ಬಾರಿ ಸೆಟ್ ಮಾಡಿಕೊಳ್ಳುತ್ತಾರೋ ಅವರು ಎಂದಿಗೂ ದುರ್ಬಲತೆಯ ಲಕ್ಷಣ ವಿರುವ ವಿಚಾರಗಳನ್ನು ಯೋಚಿಸುವುದಿಲ್ಲ. ಹೇಳುವುದಿಲ್ಲ ಮಾಡುವುದಿಲ್ಲ. ಏಕೆಂದರೆ ಮಾಸ್ಟರ್ ಸರ್ವೋಚ್ಚ ಅಧಿಕಾರಿಗಳಾಗಿದ್ದೀರಿ. ವಿಶ್ವವನ್ನು ಇಷ್ಟು ಸ್ವಲ್ಪ ಸಮಯದಲ್ಲಿ ಪರಿವರ್ತನೆ ಮಾಡುವ ಅಧಿಕಾರಿಗಳಾಗಿದ್ದೀರಿ. ಎಂದರೆ ಮಾಸ್ಟರ್ ಸರ್ವೋಚ್ಚ ಅಧಿಕಾರಿಗಳಲ್ಲಿ ಇನ್ನೂವರೆಗೂ ಒಂದು ಕ್ಷಣದಲ್ಲಿ ತಮ್ಮನ್ನು ಪರಿವರ್ತನೆ ಮಾಡಿಕೊಳ್ಳುವ ಶಕ್ತಿಯಿಲ್ಲವೇ? ನಾವು ಮಾಸ್ಟರ್ ಸರ್ವೋಚ್ಚ ಅಧಿಕಾರಿಯಾಗಿದ್ದೇವೆ - ಈ ಸ್ಥಿತಿಯನ್ನು ಸೆಟ್ ಮಾಡಿಕೊಳ್ಳಿ, ಸ್ವಯಂಚಾಲಿತ ವಸ್ತುವನ್ನು ಪದೇ-ಪದೇ ಸೆಟ್ ಮಾಡುವ ಅವಶ್ಯಕತೆ ಇರುವುದಿಲ್ಲ. ಒಂದು ಬಾರಿ ಸೆಟ್ ಮಾಡಿದರೆ ಮತ್ತೆ ತನ್ನಷ್ಟಕ್ಕೆ ತಾನೇ ನಡೆಯುತ್ತಿರುತ್ತದೆ. ತಾವೂ ಸಹ ಈಗ ಸಹಜ ಮತ್ತು ಸದಾಕಾಲದ ಕರ್ಮಯೋಗಿ ಎಂದರೆ ನಿರಂತರ ನಿರ್ವಿಕಲ್ಪ ಸಮಾಧಿಯಲ್ಲಿ ಇರುವಂತಹ ಸಹಜ ಯೋಗಿಗಳಾಗಿದ್ದೀರಾ? ಅಥವಾ ಕೇವಲ ಯೋಗಿಗಳಾಗಿದ್ದೀರಾ? ಯಾರು ಸದಾ ಯೋಗಿಗಳಾಗಿರುತ್ತಾರೋ ಅವರು ಸದಾಚಾರಿಗಳಾಗಿರುತ್ತಾರೆ. ಸದಾಚಾರಿ ಯಾರು ಆಗುತ್ತಾರೆ? ಯಾರು ಯೋಗಿ ಸ್ಥಿತಿಯಲ್ಲಿ ಸ್ಥಿತರಾಗಿರುತ್ತಾರೋ ಅವರೇ ಸದಾಚಾರಿಯಾಗಿರುತ್ತಾರೆ. ನಾವು ಸದಾಚಾರಿಗಳಾಗಿದ್ದೇವೆ. ಆದ್ದರಿಂದ ಎಂದೂ ಡಗಮಗಿಸುವುದಿಲ್ಲ. ಸದಾ ಅಚಲ-ಅಡೋಲರಾಗಿರುತ್ತೇವೆ, ಅದೇ ರೀತಿ ಈ ಭಟ್ಟಿಯಲ್ಲಿ ಪ್ರತಿಜ್ಞೆ ರೂಪದ ಸ್ವಿಚ್ ಸೆಟ್ ಮಾಡಿಕೊಂಡಿರುವಿರಾ? ಈ ರೀತಿ ಮಾಡಿದ್ದರೆ ಪ್ರತ್ಯಕ್ಷದಲ್ಲಿ ಪ್ರತಿಜ್ಞೆಯನುಸಾರ ನಡೆಯುತ್ತೀರಲ್ಲವೇ? ಆದ್ದರಿಂದ ಸದಾಚಾರಿ/ ನಿರಂತರ ಯೋಗಿ/ಸಹಜ ಯೋಗಿ ಆಗುವುದಿಲ್ಲವೇ? ಪಾಂಡವರು ಬೆಟ್ಟಗಳಿಗೆ ಹೋಗಿ ಕರಗಿದರು. ಎಂದು ಗಾಯನವಿದೆಯಲ್ಲವೇ? ಬೆಟ್ಟದ ಅರ್ಥವೇನಾಗಿದೆ? ಭೂಮಿಯಿಂದ ಬೆಟ್ಟ ಎತ್ತರವಾಗಿರುತ್ತದೆಯಲ್ಲವೇ? ಹಾಗಾದರೆ ಪಾಂಡವರು ಭೂಮಿಯಿಂದ ಎಂದರೆ ಕೆಳಗಿನ ಸ್ಥಿತಿಯನ್ನು ಬಿಟ್ಟು ಯಾವಾಗ ಉನ್ನತ ಸ್ಥಿತಿಗೆ ಹೋಗುತ್ತಾರೋ ಆಗ ತಮ್ಮ ಹಳೆಯ ಅಥವಾ ಈಶ್ವರೀಯ ಮರ್ಯಾದೆಗಳಿಗೆ ವಿರುದ್ಧವಾದ ಸಂಸ್ಕಾರ, ಸ್ವಭಾವ, ಸಂಕಲ್ಪ, ಕರ್ಮ ಅಥವಾ ಶಬ್ದಗಳಿಂದ ತಮ್ಮನ್ನು ಮರುಜೀವಾ ಮಾಡಿಕೊಂಡರು ಎಂದರೆ ಕರಗಿಹೋದರು. ಹಾಗಾದರೆ ತಾವೂ ಸಹ ಭೂಮಿಯಿಂದ ಎತ್ತರಕ್ಕೆ ಹೋಗಿದ್ದಿರಲ್ಲವೇ? ಪೂರ್ಣ ಕರಗಿ ಬಂದಿರುವಿರೋ ಅಥವಾ ಸ್ವಲ್ಪ ಇಟ್ಟುಕೊಂಡು ಬಂದಿರುವಿರೋ? ತಮ್ಮಲ್ಲಿ 100% ನಿಶ್ಚಯ ಬುದ್ಧಿಯಿದ್ದರೆ ಅಂತಹವರ ಸೋಲು ಎಂದಿಗೂ ಆಗುವುದಿಲ್ಲ. ಒಂದು ಸಾಹಸ ಬೇಕು ಎರಡನೆಯದಾಗಿ ಉಲ್ಲಾಸಬೇಕು. ಇಲ್ಲವಾದರೆ ಪ್ರಾತ್ಯಕ್ಷದಲ್ಲಿ ಪ್ರಚಾರ ಪ್ರದರ್ಶನವಾಗುವುದಿಲ್ಲ. ಆದ್ದರಿಂದ ಎರಡೂ ಜೊತೆಜೊತೆಗೆ ಬೇಕು. ಒಂದು ಅಂತರ್ಮುಖತೆ ಮತ್ತು ಹೊರಗಿನಿಂದ ಕಂಡು ಬರುವ ಹರ್ಷಿತಮುಖತೆ, ಆ ಅವಸ್ಥೆಯಿದೆಯೇ? ಎರಡೂ ಜೊತೆಜೊತೆಗೆ ಬೇಕು. ಈ ರೀತಿ ಸಾಹಸದ ಜೊತೆಗೆ ಉಲ್ಲಾಸವೂ ಬೇಕು, ಇದರಿಂದ ದೂರದಿಂದಲೇ ಇವರ ಬಳಿ ಏನೋ ವಿಶೇಷ ಪ್ರಾಪ್ತಿಯಿದೆ ಎಂದು ಗೊತ್ತಾಗುವುದು. ಪ್ರಾಪ್ತಿಯಾದವರ ನಡೆ, ಹಾವ-ಭಾವದಿಂದ ಆ ಉತ್ಸಾಹ-ಉಲ್ಲಾಸಗಳು ಕಂಡುಬರುವವು.

ಭಕ್ತಿಮಾರ್ಗದಲ್ಲಿ ಕೇವಲ ಉತ್ಸಾಹ ಕೊಡುವ ಉತ್ಸವವನ್ನು ಆಚರಣೆ ಮಾಡುವ ಸಾಧನೆ ಮಾಡಿದ್ದಾರೆ. ಖುಷಿಯಲ್ಲಿ ನೃತ್ಯ ಮಾಡುತ್ತಾರಲ್ಲವೇ ಯಾರಿಗಾದರೂ ಉದಾಸೀನತೆ ಅಥವಾ ಗೊಂದಲವಿದ್ದರೆ ಅದೂ ದೂರವಾಗುತ್ತದೆ. ಆದ್ದರಿಂದ ಸಾಹಸದ ಜೊತೆಗೆ ಉತ್ಸಾಹವೂ ಬೇಕು. ಅವಿನಾಶಿ ಸ್ಟ್ಯಾಂಪ್ ಹಾಕಿದೆಯಾ? ಅವಿನಾಶಿಯ ಸ್ಟ್ಯಾಂಪ್ ಹಾಕಿಲ್ಲದಿದ್ದರೆ ಏನಾಗುವುದು? ದಂಡ ಕೊಡಬೇಕಾಗುವುದು, ಆದ್ದರಿಂದ ಸ್ಟ್ಯಾಂಪ್ ಅವಶ್ಯವಾಗಿ ಹಾಕಬೇಕು. ಹಾಗಾದರೆ ಇದು ಸದಾಕಾಲಕ್ಕಾಗಿ ಸಮರ್ಪಣೆ ಸಮಾರಂಭವಲ್ಲವೇ? ಪದೇಪದೇ ಈ ಸಮಾರಂಭವನ್ನು ಆಮೇಲೆ ಆಚರಣೆ ಮಾಡಬೇಕಾಗಿಲ್ಲ ತಾನೇ? ನೆನಪಿನ ಸ್ಮೃತಿಚಿಹ್ನೆಯಾಗಿ ಆಚರಿಸುವುದು ಬೇರೆ ಮಾತು, ಹೇಗೆ ಜನ್ಮದಿನವನ್ನು ನೆನಪಿಗಾಗಿ ಆಚರಿಸುತ್ತಾರಲ್ಲವೇ?

ಹಾಗಾದರೆ ಈ ಸಮರ್ಪಣೆ ಪ್ರತಿಜ್ಞೆಯ ವಿಜಯದ ದಿನವನ್ನೂ ಆಚರಿಸುತ್ತಾರೆ. ಹಾಗಾದರೆ ಇದೂ ಸಹ ತಮ್ಮೆಲ್ಲರ ವಿಜಯಾಷ್ಟಮಿ ದಿನವಾಯಿತಲ್ಲವೇ? ವಿಜಯಿಯಾಗುವ ದಿನ ಸದಾ ಸ್ಮೃತಿಯಲ್ಲಿ ಇಟ್ಟುಕೊಳ್ಳುತ್ತಾರೆ. ಎಲ್ಲರ ಮುಖದಿಂದ ತಮ್ಮನ್ನು ನೋಡಿ 'ವಾಹ-ವಾಹ' ಎಂದು ಬರಬೇಕು ಮತ್ತು ನಿಮ್ಮನ್ನು ಎಲ್ಲರೂ ಅನುಸರಿಸಬೇಕು. ಯಾವುದಾದರೂ ಒಳ್ಳೆಯ ವಿಷಯವಿದ್ದರೆ ತಿಳಿಯದೆಯೇ ಎಲ್ಲರೂ ಅವರನ್ನು ಅನುಸರಿಸುವ ಇಚ್ಛೆಯನ್ನು ಇಟ್ಟುಕೊಳ್ಳುತ್ತಾರೆ. ಹೇಗೆ ತಂದೆಯನ್ನು ಅನುಸರಿಸುತ್ತೀರೋ ಹಾಗೆ ತಮ್ಮ ಪ್ರತಿಯೊಂದು ಕರ್ಮವನ್ನು ಅನುಸರಿಸಬೇಕು. ಎಷ್ಟು ಶ್ರೇಷ್ಠ ಕರ್ಮವೋ ಅಷ್ಟು ಶ್ರೇಷ್ಠ ಆತ್ಮರಲ್ಲಿ ಸ್ಮರಿಸಲ್ಪಡುತ್ತೀರಿ. ಹೆಸರನ್ನು ಸ್ಮರಿಸುತ್ತಾರಲ್ಲವೇ? ಯಾರು ಎಷ್ಟು ಶ್ರೇಷ್ಠ ಆತ್ಮರೋ, ಇಚ್ಛೆಯಿಲ್ಲದಿದ್ದರೂ ಅವರ ಗುಣ ಮತ್ತು ಕರ್ಮದ ಉದಾಹರಣೆ ಮಾಡಲು ಹೆಸರನ್ನು ಸ್ಮರಿಸುತ್ತಾರೆ. ಅದೇ ರೀತಿ ತಾವೆಲ್ಲಾ ಶ್ರೇಷ್ಠ ಆತ್ಮರಲ್ಲಿ ಸ್ಮರಣೆಗೆ ಯೋಗ್ಯರಾಗುವಿರಿ. ಈಗಂತೂ ಯೋಗಿಯಾಗುವ ಜವಾಬ್ದಾರಿ ತೆಗೆದುಕೊಂಡಿರುವಿರಲ್ಲವೇ? ಯೋಗಯುಕ್ತ ಮತ್ತು ಯುಕ್ತಿಯುಕ್ತ. ಯಾವುದೇ ಯುಕ್ತಿಯುಕ್ತ ಸಂಕಲ್ಪ, ಶಬ್ದ, ಕರ್ಮವಾಗದಿದ್ದರೆ ಯೋಗಯುಕ್ತರಾಗಿಲ್ಲವೆಂದು ತಿಳಿದುಕೊಳ್ಳಬೇಕು ಏಕೆಂದರೆ ಯೋಗಯುಕ್ತರ ಲಕ್ಷಣವಾಗಿದೆ ಯುಕ್ತಿಯುಕ್ತ. ಯೋಗಯುಕ್ತನ ಕರ್ಮ ಅಥವಾ ಸಂಕಲ್ಪ ಎಂದಿಗೂ ಅಯುಕ್ತವಾಗಿರುವುದಿಲ್ಲ. ಇದಾಗಿದೆ ಪರಸ್ಪರ ಸಂಬಂಧ. ಓಂ ಶಾಂತಿ.

ಅವ್ಯಕ್ತ ಮುರಳಿ 01-08-1971.

***ಸ್ವಯಂನ ಸ್ಥಿತಿಯನ್ನು ಸೆಟ್ ಮಾಡಿಕೊಳ್ಳುವ ವಿಧಿ***

*ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.*

ನಾನು ಆತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಹಳೆಯ ಕರ್ಮ, ಸ್ವಭಾವ, ಸಂಸ್ಕಾರ, ಮರ್ಯಾದೆಗಳನ್ನು ತ್ಯಾಗ ಮಾಡಿದ್ದೇನೆ.

2. ನಾನು ನನ್ನ ಸಂಪೂರ್ಣ ಸ್ಥಿತಿ, ತಂದೆಯ ಸಮಾನ ಸ್ಥಿತಿ, ಕರ್ಮಾತೀತ ಸ್ಥಿತಿಯನ್ನು ಸೆಟ್ ಮಾಡಿಕೊಂಡು, ಸಂಕಲ್ಪ, ಮಾತು ಅಥವಾ ಕರ್ಮ ಎಲ್ಲವನ್ನೂ ಕೂಡ ಆ ಸೆಟ್ ನ ಅನುಸಾರವಾಗಿ ನಡೆಸುವ ಅಥಾರಿಟಿ ಸ್ವರೂಪ.

3. ನಾನು ಒಂದು ಕ್ಷಣದಲ್ಲಿ ಸ್ವಯಂ ಅನ್ನು ಪರಿವರ್ತನೆ ಮಾಡಿಕೊಂಡಿರುವ ಮಾಸ್ಟರ್ ಸರ್ವ ಶಕ್ತಿವಂತನು.

4. ನಾನು ನಿರ್ವಿಕಲ್ಪ ಸ್ಥಿತಿಯಲ್ಲಿರುವ ಸಹಜ ಯೋಗಿ ಮತ್ತು ಕರ್ಮಯೋಗಿ.

5. ನಾನು ಸದಾ ಯೋಗಿ ಸ್ಥಿತಿಯಲ್ಲಿ ಅಚಲವಾಗಿ, ಸ್ಥಿರವಾಗಿ ಇರುವ ಸದಾಚಾರಿ.

6. ನಾನು ಸ್ವಯಂನ ಮೇಲೆ 100% ನಿಶ್ಚಯವಿರುವ ನಿಶ್ಚಯ ಬುದ್ಧಿ ಸ್ವರೂಪ.

7. ನನ್ನ ನಡವಳಿಕೆಯಲ್ಲಿ, ಮುಖದಲ್ಲಿ ಧೈರ್ಯ ಮತ್ತು ಉತ್ಸಾಹ ಎರಡನ್ನೂ ಜೊತೆ ಜೊತೆಗೆ ಇಟ್ಟುಕೊಂಡಿರುವ ಆಕರ್ಷಣಾ ಮೂರ್ತಿ.

8. ನಾನು ಅಂತರ್ಮುಖತೆ ಮತ್ತು ಹರ್ಷಿತ ಮುಖತೆಯನ್ನು ಧಾರಣೆ ಮಾಡಿರುವ ವಿಶೇಷ ಸ್ವರೂಪ.

9. ನಾನು ಅವಿನಾಶಿ ಮುದ್ರೆ ಹಾಕಿಕೊಂಡು ಸಮರ್ಪಣಾ ಸಮಾರೋಪವನ್ನು ಆಚರಿಸಿಕೊಂಡಿದ್ದೇನೆ.

10. ನನ್ನ ಸಂಕಲ್ಪ, ಮಾತು, ಕರ್ಮ ಮೂರನ್ನೂ ಯುಕ್ತಿಯುಕ್ತವಾಗಿ, ಯೋಗಯುಕ್ತವಾಗಿ ಮಾಡಿಕೊಂಡಿದ್ದೇನೆ.